ಅಲ್ಲಿ ಕರ್ಕೊಂಡೋಗೋದಕ್ಕೆ ಭಯವಾಗುತ್ತೆ ಕಣೆ. ಅವನು ಮತ್ತೆ ನಿನ್ನನ್ನು ಕರೆಸಿಕೊಳ್ದೆ ಇದ್ರೆ? ನಮಗೆ ವಯಸ್ಸಾಯ್ತು. ಮುಂದೆ ಬದುಕಿಗೆ ಅವನೇ ಅಲ್ವಾ?"

ಎದ್ದು ಹೊರಟ್ರು. ನಿಂತು ಮತ್ತಂದ್ರು,

"ನಿನ್ನಪ್ಪ ಒಳಗ್ಬರಲ್ವಂತೆ. ಅವರ್ಗೆ ನಿನ್ನೋಡಿದ್ರೆ ಅಳು ಬರುತ್ತಂತೆ. ಆರೋಗ್ಯ ನೋಡ್ಕೋಬೇಕಂತೆ. ಹೇಳಿದ್ದಾರೆ." ಹೊರಟ್ರು.

ಮಂದಾಕಿನಿ ಮೌನವಾಗಿ ಕೂತ್ಲು. ಮೂರು ತಿಂಗ್ಳು ಕಳೀತು. ಮೈ ನಿಧಾನವಾಗೇ ಸ್ವಾಭಾವಿಕವಾಗ್ತಿತ್ತು. ಮನೆಯಲ್ಲಿ ಎಲ್ಲಾ ಮೌನದಲ್ಲಿದ್ರು. ಎಷ್ಟು ಬೇಕೋ ಅಷ್ಟೇ ಮಾತು. ಎಲ್ಲಾ ಇತ್ತು. ಮನೆ ಮೌನವಾಗಿತ್ತು. ಎಲ್ರಿಗೂ ಸ್ವಾತಂತ್ರ್ಯವಿತ್ತು. ಏಕಾಂತಕ್ಕೆ ಜಾಗವಿತ್ತು. ಕೆಲಸದವ್ರಿದ್ರು. ಅಡಿಗೆಯನಿದ್ದ. ಹೊತ್ತು ಹೊತ್ತಿಗೆ ಎಲ್ಲ ಆಗ್ತಿತ್ತು.

ಆದರೆ ಮಾತಿಲ್ಲ, ಕತೆಯಿಲ್ಲ. ಸ್ಮಶಾನ ಮೌನ.

ಮಲೆನಾಡ ಹುಡುಗಿಗೆ ಸೂತಕ ಬಹಳ ದಿನ ಒಗ್ಗಲಿಲ್ಲ. ಮನಸ್ಸಿಗೆ ಮುದ ಬೇಕಿತ್ತು. ಮಾತು ಬೇಕಿತ್ತು. ರುಚಿ ಬೇಕಿತ್ತು. ಸಂಭ್ರಮ ಬೇಕಿತ್ತು. ಸತ್ತದ್ದು ಮಗು; ಅಮ್ಮ ಅಲ್ಲ.

ಅತ್ತೇನ ಮಾತಿಗೆ ಎಳೆದ್ಳು, ಅವರು ಒಂದೇ ಮಾತಂದ್ರು: "ಅದೇನೋಪ್ಪಾ, ಈಗಿನ ಕಾಲದ ಹೆಣ್ಣು ಮಕ್ಳು! ದುರಂತಗಳನ್ನ ಬಹಳ ಬೇಗ ಮರೀತೀರಿ. ನಮಗೆ ಹಾಗಾಗಲ್ಲಪ್ಪಾ. ಇನ್ನಾರು ತಿಂಗ್ಳು ನನ್ನ ಮಾತಾಡಿಸ್ಬೇಡ. ನಿನಗೆ ಅರ್ಥ ಆಗಲ್ಲ. ಒಬ್ನೇ ಮಗ. ಅವನಿಗೆ ಮಕ್ಳಿಲ್ಲ ಅಂದ್ರೆ ಮುಂದಕ್ಕೆ ಹ್ಯಾಗೆ? ನಮಗೆ ಬೇಕು. ಮೊಮ್ಮಕ್ಕಳ ಸುಖ ಬೇಕು. ಅವರ ಮದುವೆ ಮುಂಜಿ ನೋಡಬೇಕು. ಸಂಭ್ರಮಿಸಬೇಕು. ಕರ್ಮ ನಮಗಿನ್ನೂ 55. ಆರೋಗ್ಯ ಚೆನ್ನಾಗಿದೆ. ಎಷ್ಟು ವರ್ಷ ನಿಮ್ಮಗಳ ಮಧ್ಯೆ ಮಿಣಮಿಣ ಅಂತ ನಿಮ್ಮಗಳ ಮುಖ ನೋಡ್ತಾ ಕಳೀಲಿ?"

ಅತ್ತೆಯೊಟ್ಟಿಗಿನ ಸಂಬಂಧ ಮುಗಿದಿತ್ತು.

ಮಾವ ಸಭ್ಯ. ಅವನಿಗೆ ಅರ್ಥ ಆಗ್ಬಹುದು ಅನ್ಸಿತ್ತು. ಮಾವನ್ನ ಕೂರಿಸ್ಕೊಂಡು ಅಂದ್ಲು.

"ಮುಗಿದು ಹೋಗಿಲ್ಲ ಮಾವ, ನನ್ಗೇನು ವಯಸ್ಸು ಕಳ್ದಿಲ್ಲ. ಮತ್ತೆ ಡಾಕ್ಟ್ರ ಹತ್ರ ಹೋಗ್ತೀನಿ. ಆಗುತ್ತೆ. ಮಕ್ಳು ಆಗುತ್ತೆ."

ಅಂದ ಸಂಭಾವಿತ,

"ನಿನ್ಗೊತ್ತಾಗಲ್ಲ ಕಣಮ್ಮ. ನಿನ್ಗೊತ್ತಾಗಲ್ಲ. ನೀನಂತೀಯ. ಮತ್ತೆ ಡಾಕ್ಟ್ರರತ್ರ ಹೋಗ್ತೀವಿ, ಮತ್ತೆ ಪ್ರಯತ್ನಿಸೋಣ. ಆಗಬೇಕಲ್ವಾ? ಬರೀ ಪ್ರಯತ್ನ ಅಲ್ವಾ? ಫಲಾನೂ ಬರ್ಬೇಕಲ್ವಾ?"

"ಅಂದ್ರೆ?..."

"ಸ್ವಾಭಾವಿಕವಾಗಿ ಆಗ್ಬೇಕಿತ್ತು. ಆಗ್ಲಿಲ್ಲ. ಪ್ರಯತ್ನ ಮಾಡಿದ್ರಿ. ಉಳೀಲಿಲ್ವೆ. ಮತ್ತೆ ಪ್ರಯತ್ನಿಸಿದರೂ ಗ್ಯಾರಂಟಿ ಏನು? ಅವನ ದೃಷ್ಟಿಯಲ್ಲಿ ಯೋಚ್ನೆ ಮಾಡು. ದೊಡ್ಡ ಹುದ್ದೇಲಿದ್ದಾನೆ. ಪುರುಸೊತ್ತು ಕಮ್ಮಿ. ಅಲ್ದೇ ಇದೆಲ್ಲ ಅಸಹಜ ಕ್ರಿಯೆಗಳು ಕರ್ಮ ಅಲ್ವ? ಅವನಿಗನ್ಸುತ್ತೆ. ನಾನ್ಯಾಕಿದನ್ನನುಭವಿಸ್ಬೇಕು, ಡಾಕ್ಟ್ರ ಹತ್ರ ಹೋಗು. ಅವರ ಪರೀಕ್ಷೆಗಳಿಗೆ ಮೈಯೊಡ್ಡು. ಯಾಕೆ ಅಂತ ಅನ್ನಲ್ವ? ಕಷ್ಟಾನಮ್ಮಾ ಅದು ನಮ್ಮ ಕತೆ ಹೇಳು. ಒಬ್ನೇ ಮಗ, ಅವನಿಗೆ ಮಕ್ಳಿಲ್ಲಾಂತಾದ್ರೆ? ಆಸ್ತಿ ಇದೆ. ಕನಸು ಕಂಡಿದ್ದೀವಿ. ಸಣ್ಣಪುಟ್ಟ ಕರ್ಮಕ್ಕಾದ್ರೂ ಸಂತಾನ ಬೇಕಲ್ವಾ?"

"ದತ್ತು ತಕ್ಕೊಳ್ಳೋಣ."

"ಅಂದ್ರೆ ಅಡಾಪ್ಟ್ ಮಾಡಿಕೊಳ್ಳೋದಾ? ಅದು ನನಗಿಷ್ಟ ಇಲ್ಲಮ್ಮ. ಯಾರೋ ಬಂದು ತಿಂದು